ಆ) ಈ ಯೋಜನೆಯಲ್ಲಿ ಉತ್ಪಾದನಾ ಹಾಗೂ ಅನುತ್ಪಾದನಾ ಬಾಬುಗಳಿಗೆ ಎಷ್ಟು ವೆಚ್ಚ ಮಾಡಲು ಯೋಜನೆಯನ್ನು ತಯಾರಿಸಲಾಗಿದೆ ?

ಇ) ರೇಷ್ಮೆ ಗುಣಮಟ್ಟದ ಹಾಗೂ ರೇಷ್ಮೆ ಇಳುವರಿಯನ್ನು ಅಭಿವೃದ್ಧಿಪಡಿಸಲು ಯಾವುದಾದರೂ ಯೋಜನೆಗಳನ್ನು ಮೇಲಿನ ಕರಡಿನಲ್ಲಿ ಅಳವಡಿಸಲಾಗಿದೆಯೇ ?

ಶ್ರೀ ಕೃಷ್ಣ, (ರೇಷ್ಮೆ ಹಾಗೂ ಪಶುಸಂಗೋಪನಾ ಸಚಿವರು).—

ಅ) ತಯಾರಿಸಲಾಗಿದೆ.

ಆ) ಯೋಜನೆಯ ಒಟ್ಟು ಅಂದಾಜು ವೆಚ್ಚ ೧೯೬.೫೦ ಕೋಟಿ ರೂಪಾಯಿಗಳು.

ಇ) ಅಳವಡಿಸಲಾಗಿದೆ.

೧೦–೫೦ಪಿ. ಎಂ.

ಶ್ರೀ ಜಿ. ರಾಜಗೌಡ. —ಇದನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ 'ತಯಾರಿಸಲಾಗಿದೆ' ಎಂದು ಹೇಳಿದ್ದೀರಿ. ಈ ಯೋಜನೆಯ ಕರಡಿನ ಬಗ್ಗೆ ಅಂತಿಮ ತೀರ್ಮಾನ ಕೈಕೊಳ್ಳುವುದಕ್ಕೆ ಮೊದಲು ಶಾಸಕರ ಒಂದು ಸಭೆಯನ್ನು ಕರೆಯುತ್ತೀರಾ ? ಈ ಯೋಜನೆಯ ಒಟ್ಟು ಅಂದಾಜು ವೆಚ್ಚವಾದಂಥ ೧೯೬.೫೦ ಕೋಟಿ ರೂಪಾಯಿಗಳ ಪೈಕಿ ಉತ್ಪಾದನಾ ವೆಚ್ಚವೆಷ್ಟು ಮತ್ತು ಅನುತ್ಪಾದನಾ ಬಾಬುಗಳಿಗೆ ಆಗುವಂತಹ ವೆಚ್ಚ ಎಷ್ಟು ಎಂಬುದನ್ನು ತಿಳಿಸುತ್ತೀರಾ ? ಕೊನೆಯದಾಗಿ ಈ ರೇಷ್ಮೆ ಗುಣಮಟ್ಟ ಮತ್ತು ರೇಷ್ಮೆ ಇಳುವರಿಯನ್ನು ಅಭಿವೃದ್ಧಿಪಡಿಸಲು ಏನೇನು ಕ್ರಮ ಕೈಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಕೃಷ್ಣ.—ಇದಕ್ಕೆ ಸಂಬಂಧಪಟ್ಟಂತೆ ಒಂದು ಸಲಹಾ ಸಮಿತಿ ಇದೆ. ಈ ಅಧಿವೇಶನ ಮುಗಿಯುವುದರೊಳಗಾಗಿ ಆ ಸಲಹಾ ಸಮಿತಿಯ ಸಭೆಯನ್ನು ಕರೆದು, ಸಂಬಂಧಪಟ್ಟ ಶಾಸಕರನ್ನು ಸಹ ಆ ಸಭೆಗೆ ಕರೆದು ಈ ಕರಡು ಯೋಜನೆಯ ಬಗ್ಗೆ ಶಾಸಕರ ಅಭಿಪ್ರಾಯಗಳನ್ನು ಪಡೆದುಕೊಳ್ಳುತ್ತೇವೆ. ಮತ್ತೆ ಎರಡನೆಯದಾಗಿ ಈ ೧೯೬.೫೦ ಕೋಟಿ ರೂಪಾಯಿಗಳಲ್ಲಿ ಉತ್ಪಾದನಾ ವೆಚ್ಚವೆಷ್ಟು ಮತ್ತು ಅನುತ್ಪಾದನಾ ವೆಚ್ಚವೆಷ್ಟು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ನಾವು ಮೊದಲನೇ ಹಂತದ ಯೋಜನೆಯಲ್ಲಿ ದೊಡ್ಡದೊಡ್ಡ ಕಟ್ಟಡಗಳನ್ನು ಕಟ್ಟಿದ್ದು, ಮಾರ್ಕೆಟ್‌ಗಳನ್ನು ಕಟ್ಟಿಸಿದ್ದು, ಜೀಪುಗಳನ್ನು ಕೊಂಡಿದ್ದು ಅನುತ್ಪಾದನಾ ವೆಚ್ಚ ಎಂಬ ಭಾವನೆ ಮಾನ್ಯ ಸದಸ್ಯರಲ್ಲಿ ಇದೆ. ಈ ರೇಷ್ಮೆ ಕೃಷಿಯನ್ನ ಅಭಿವೃದ್ಧಿಪಡಿಸಲು ಇನ್‌ಫ್ರಾಸ್ಟ್ರಕ್ಚರ್‌ನ ಅವಶ್ಯಕತೆ ಇದೆ. ಆದ್ದರಿಂದ ಇದನ್ನೆಲ್ಲಾ ಅನುತ್ಪಾದನಾ ಬಾಬುಗಳೆಂದು ಹೇಳುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ಶಾಸಕರ ಅಭಿಪ್ರಾಯ ಏನಿದೆ, ರೇಷ್ಮೆ ಬೆಳೆಗಾರರ ಅಭಿಪ್ರಾಯ ಏನಿದೆ ಎಂಬುದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಾವು ಎರಡನೇ ಹಂತದ ಕರಡು ಯೋಜನೆಯನ್ನು ತಯಾರಿಸಿದ್ದೇವೆ. ಈ ರೇಷ್ಮೆ ಕೃಷಿಗೆ ಹೆಚ್ಚಿನ ಆದ್ಯತೆ ಕೊಡುವ ರೀತಿಯಲ್ಲಿಯೇ ನಾವು ಇದನ್ನು ತಯಾರು ಮಾಡಿದ್ದೇವೆ.

ಉಳ್ಳಾಲ ಆರೋಗ್ಯ ಕೇಂದ್ರದಲ್ಲಿ ಹೆರಿಗೆ ಭತ್ಯೆ.

೩೦೭೦. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬–೮೭, ೧೯೮೭–೮೮ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೊಳಪಟ್ಟಿರುವ ಹಳ್ಳಿಗಳಲ್ಲಿ ಸರಕಾರದಿಂದ ವಿತರಣೆಯಾಗಿರುವ ಹೆರಿಗೆ ಭತ್ಯದ ಮೊತ್ತವೆಷ್ಟು ? ಹೆರಿಗೆ ಭತ್ಯೆ ಪಡೆದ ಜನರ ಸಂಖ್ಯೆಯೆಷ್ಟು ?

ಆ) ಈ ಹಣದ ವಿತರಣೆಯಲ್ಲಿ ವಿಳಂಬ ಧೋರಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ, (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು). —

	ವರ್ಷ	ಫಲಾನುಭವಿಗಳ ಸಂಖ್ಯೆ
ಅ)	೧೯೮೬-೮೭ ರೂ. ೪೪,೪೦೦—೦೦	೧೪೮
	೧೯೮೭-೮೮ ರೂ. ೩೦,೦೦೦—೦೦	೧೦೦

ಆ) ಇಲ್ಲ

ಇ) ಉದ್ಭವಿಸಿವುದಿಲ್ಲ

ಶ್ರೀ ಬಿ. ಎಂ. ಇದಿನಬ್ಬ — ಮಾನ್ಯ ಅಧ್ಯಕ್ಷರೇ, ಇಲ್ಲಿ ಫಲಾನುಭವಿಗಳ ಸಂಖ್ಯೆ ೧೯೮೬-೮೭ರಲ್ಲಿ ೧೪೮ ಮತ್ತು ೧೯೮೭-೮೮ರಲ್ಲಿ ನೂರು ಎಂದು ಹೇಳಿದ್ದಾರೆ. ಅಂದರೆ ೧೯೮೭-೮೮ರಲ್ಲಿ ಫಲಾನುಭವಿಗಳನ್ನು ಆರಿಸುವ ವಿಷಯದಲ್ಲಿ ಅಧಿಕಾರಿಗಳು ಉದಾಸೀನರಾಗಿದ್ದರೇ ಅಥವಾ ಉಳ್ಳಾಲ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟುವ ಕಲ್ಯಾಣ ಯೋಜನೆಯಲ್ಲಿ ಪ್ರಥಮ ಸ್ಥಾನದಲ್ಲಿಯೇ ಎಂದು ಕೇಳಬಯಸುತ್ತೇನೆ? ನನ್ನ 'ಅ' ಮತ್ತು 'ಇ' ಪ್ರಶ್ನೆಗಳಿಗೆ ಉತ್ತರವಾಗಿ 'ಇಲ್ಲ' ಮತ್ತು 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದೀರಿ. ಆದರೆ ನನಗೆ ಬಂದ ವದಂತಿಯ ಪ್ರಕಾರ ಹಣದ ವಿತರಣೆಯಲ್ಲಿ ದುರ್ವ್ಯಯವಾಗಿದೆ. ಆದ್ದರಿಂದ ಹಣದ ದುರ್ವ್ಯಯ ಆಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ತಾವು ಮತ್ತೊಮ್ಮೆ ವಿಚಾರಣೆ ಮಾಡಿಸಿ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ ಆರ್ ಸಿಂಧ್ಯ — ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ೧೯೮೬-೮೭ಕ್ಕೂ ೧೯೮೭-೮೮ಕ್ಕೂ ಫಲಾನುಭವಿಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳಿದ್ದಾರೆ ಸಾಮಾನ್ಯವಾಗಿ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಡಾಕ್ಟರ್ಸ್ ಫಲಾನುಭವಗಳನ್ನು ಹುಡುಕಿಕೊಂಡು ಹೋಗುವುದಿಲ್ಲ. ಫಲಾನುಭವಿಗಳೇ ಬಂದು ಅಪ್ಲಿಕೇಷನ್ ಕೊಟ್ಟು ಅವರಿಗೆ ಜಮೀನಿಲ್ಲ, ಕೂಲಿಕಾರ್ಮಿಕರಿದ್ದಾರೆ ಎಂದು ಸರ್ಟಿಫೈ ಮಾಡುತ್ತಾರೆ. ಈಗ ಅಪ್ಲಿಕೇಷನ್ಸ್ ಕಡಿಮೆ ಕೊಟ್ಟಿದ್ದಾರೆ, ಆದರೂ ಸಹ ಇದರ ಬಗ್ಗೆ ವಿಚಾರಿಸುತ್ತೇನೆ. ಆನಂತರ ಕುಟುಂಬ ಯೋಜನೆಯಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ಸ್ ಗೆ ಇರುವ ಸ್ಥಾನದಲ್ಲಿದೆ ಎನ್ನುವುದು ಪ್ರತ್ಯೇಕ ಪ್ರಶ್ನೆಯಾಗುತ್ತದೆ. ಅಲ್ಲಿ ದುರುಪಯೋಗವಾಗಿದೆ ಎಂಬ ವದಂತಿ ಇದೆ ಎಂದು ಹೇಳಿದ್ದಾರೆ. ವದಂತಿ ಇದೆಯೆಂದರೆ ಅದರ ಬಗ್ಗೆ ವಿಚಾರಣೆ ಮಾಡಲಿಕ್ಕೆ ಆಗುವುದಿಲ್ಲ. ಸ್ಪೆಸಿಫಿಕ್ಕಾಗಿ ಅಧಿಕಾರಿಗಳು ಇಂಥಾದ್ದು ಮಾಡಿಲ್ಲ, ಉದಾಸೀನ ಮಾಡಿದ್ದಾರೆ ಎಂದು ತಿಳಿಸಿದರೆ ನಾನು ನೋಡಿಸುತ್ತೇನೆ.

ಹೊನ್ನಾಳಿಯಲ್ಲಿ ತಂಗುದಾಣದ ನಿರ್ಮಾಣ

೪೧೫. ಶ್ರೀ ಡಿ. ಜಿ. ಬಸವನಗೌಡ, (ಹೊನ್ನಾಳಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲಾ ಹೊನ್ನಾಳಿ ಪಟ್ಟಣದ ಮುಖಾಂತರ ಪ್ರತಿದಿನ ನೂರಕ್ಕೂ ಮೇಲ್ಪಟ್ಟು ಸರ್ಕಾರಿ ಬಸ್ಸುಗಳು ಹಾಯು ಹೋಗುತ್ತಿರುವುದು ನಿಜವೆ ?

ಆ) ಪಾಗಿದ್ದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಪ್ರಯಾಣಿಕರ ತಂಗುದಾಣವನ್ನು ನಿರ್ಮಿಸದಿರಲು ಕಾರಣವೇನು ?

ಇ) ಈಗಲಾದರೂ ನಿಗಮದವರು ತಂಗುದಾಣ ನಿರ್ಮಿಸಲು ಕ್ರಮ ಕೈಗೊಳ್ಳುವರೇ ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ನಿಜ

ಆ) ಹಾಲಿ ಪ್ರಯಾಣಿಕರ ಅನುಕೂಲಕ್ಕಾಗಿ ಪುರಸಭೆಯವರು ಕಟ್ಟಿಗುವ ಬಸ್ ನಿಲ್ದಾಣವಿದೆ.